3 Yes, about 400 writ petitions were filed in the High Court against SAS. All were rejected.

4 No New System is introduced. But an option is given to the tax payers to pay the arrears of tax for the years 2002-2005 at the rate not exceeding 2 1/2 time of tax fixed for the year 2001-02. The tax payers can pay the tax as per SAS or
2 1/2 times the tax fixed for 2001-02 as per their convenience.

5 After holding discussions with a few senior Legislators and representatives of tax payers the above option was provided to the tax payers.

281(433) ಶ್ರೀ. ಮನೋಹರ ಕಲ್ಲಪ್ಪ ಕಿನೇಕರ್ (ಉಚ್ಚಗಾಂವ್) ಮಾನ್ಯ ಮುಖ್ಯ ಮಂತ್ರಿಯವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕನನೀಸ ಮತ್ತು ಒಚ ಮಂಡಳಿ, ಬೆಳಗ್ಗಾವಿ ವಲಯವನ್ನು ನಗರಪಾಲಿಕೆಯೊಂದಿಗೆ ಸೇರ್ಪಡಿಸಲಾಗಿದೆಯೇ ;

ಆ) ಹಾಗಿದ್ದರೆ ಯಾವಾಗಿನಿಂದ ;

ಇ) ಕನನೀಸ ಮತ್ತು ಒಚ ಮಂಡಳಿಯ ಆಸ್ತಿಯನ್ನು ನಗರಪಾಲಿಕೆ, ಬೆಳಗಾವಿಗೆ ಹಸ್ತಾಂತರಿಸಲಾಗಿದೆಯೇ ;

ಈ) ಕನನೀಸ ಮತ್ತು ಒಚ ಮಂಡಳಿಯ ಆಸ್ತಿಯನ್ನು ಯಾವುದೇ ಖಾಸಗಿ ಸಂಸ್ಥೆಗೆ ಹಂಚಲಾಗಿದೆಯೇ ;

ಉ) ಹಾಗಿದ್ದರೆ, ಖಾಸಗಿ ಸಂಸ್ಥೆಯ ಹೆಸರೇನು ಹಾಗೂ ಎಷ್ಟು ಜಾಗವನ್ನು ನೀಡಲಾಗಿದೆ ;

ಊ) ಉದ್ದೇಶ ಪೂರ್ಣಗೊಂಡಿದೆಯೇ ಅಥವಾ ಇಲ್ಲವೇ ;

ಋ) ಯಾವ ಉದ್ದೇಶಕ್ಕಾಗಿ ಜಾಗವನ್ನು ಮಂಡಳಿಯವರು ವಶಪಡಿಸಿಕೊಂಡಿದ್ದರು ?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಇಲ್ಲ

ಈ) ಇಲ್ಲ

ಉ) ಉದ್ಭವಿಸುವುದಿಲ್ಲ

ಊ) ಉದ್ಭವಿಸುವುದಿಲ್ಲ

ಋ) ಉದ್ಭವಿಸುವುದಿಲ್ಲ

282(412) ಶ್ರೀ ಮೋಹನ್ ಪಿ.ಸಿ(ಚಿಕ್ಕಪೇಟೆ) ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಬೆಂಗಳೂರು ದಕ್ಷಿಣ ತಾಲ್ಲೂಕು, ಅಗರ ಗ್ರಾಮದ ವ್ಯಾಪ್ತಿಯಲ್ಲಿ ಬಡಾವಣೆ ನಿರ್ಮಾಣಕ್ಕೆ ಜಮೀನು ವಶಪಡಿಸಿಕೊಂಡಿದ್ದು ಯಾವಾಗ ;

ಆ) ವಶಪಡಿಸಿಕೊಳ್ಳಲಾದ ಜಮೀನು ಎಷ್ಟು ;

ಇ) ಈ ಜಮೀನಿನಲ್ಲಿ ಬಡಾವಣೆ ನಿರ್ಮಿಸಲಾಗಿದೆಯೇ ;

ಈ) ಇಲ್ಲದಿದ್ದಲ್ಲಿ ಕಾರಣವೇನು ;

ಉ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸ್ವಾಧೀನಪಡಿಸಿಕೊಂಡಿದ್ದ ಭೂಮಿಯನ್ನು ಕೆಐಎಡಿಬಿ ವತಿಯಿಂದ ಇತರರಿಗೆ ಮಾರಾಟ ಮಾಡಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

ಊ) ಈ ರೀತಿ ಮಾರಾಟಕ್ಕೆ ಸರಕಾರ ಅನುಮತಿ ನೀಡಿದೆಯೇ ;

ಋ) ಇದು ಸರಕಾರದ ನೀತಿಗೆ ವಿರುದ್ಧವಲ್ಲವೇ ;

ೠ) ಈ ಪ್ರಕರಣದಲ್ಲಿ ಯಾರನ್ನು ತಪ್ಪಿತಸ್ಥರೆಂದು ಗುರುತಿಸಲಾಗುವುದು ಮತ್ತು ಅವರ ವಿರುದ್ಧ ಕೈಗೊಂಡಿರುವ ಕ್ರಮವೇನು?

ಶ್ರೀ ಎನ್.ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು) :

ಅ) ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಅಗರ ಗ್ರಾಮದಲ್ಲಿಯ ಒಟ್ಟು 158 ಎಕರೆ 15 ಗುಂಟೆ ಜಮೀನನ್ನು ಹೊಸೂರು ರಸ್ತೆ ಸರ್ಜಾಪುರ ರಸ್ತೆ 2ನೇ ಹಂತ ಬಡಾವಣೆಗಾಗಿ ಭೂಸ್ವಾಧೀನ ಪಡೆಯಲು ಪ್ರಾಧಿಕಾರದಿಂದ ಪ್ರಾರಂಭಿಕ ಅಧಿಸೂಚನೆ ಸಂಖ್ಯೆ : ಬಿಡಿಎ:ಎಸ್ಎಎಲ್ಎಒ, ದಿನಾಂಕ : 24-7-91 ಮತ್ತು ಅಂತಿಮ ಅಧಿಸೂಚನೆ ಸಂಖ್ಯೆ : ಯುಡಿಡಿ 716 ಎಂಎನ್ಎಕ್ಸ್ 94 ದಿನಾಂಕ : 24-5-96 ರಂದು ಹೊರಡಿಸಲಾಗಿತ್ತು. ಈ ಜಮೀನುಗಳ ಭೂಸ್ವಾಧೀನವನ್ನು ಪ್ರಾಧಿಕಾರವು ಪಡೆದಿರುವುದಿಲ್ಲ.

ಏತನ್ಮಧ್ಯೆ ಕೆಐಎಡಿಬಿಯು ಕೂಡ ಈ ಜಮೀನುಗಳಿಗೆ ಅಂತಿಮ ಅಧಿಸೂಚನೆಯನ್ನು ದಿನಾಂಕ : 15-1-2001ರಂದು ಹೊರಡಿಸಿತ್ತು. ತದನಂತರ ಬೆಳವಣಿಗೆಯ ಹಿನ್ನೆಲೆಯಲ್ಲಿ ಕೆಐಎಡಿಬಿಯ ಪರವಾಗಿ ಸದರಿ ಜಮೀನನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ : ಯುಡಿಡಿ 64 ಎಂಎನ್ಎಕ್ಸ್ 2004, ದಿನಾಂಕ : 10-02-2004 ರನ್ವಯದ ಮೇರೆಗೆ ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡಲಾಯಿತು. ಪ್ರಸ್ತುತ ಜಮೀನು ಕೆಐಎಡಿಬಿಯ ವಶದಲ್ಲಿದೆ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಪ್ರಶ್ನೆ (ಅ)ಕ್ಕೆ ನೀಡಿರುವ ಉತ್ತರ ಇದಕ್ಕೂ ಅನ್ವಯವಾಗುತ್ತದೆ.

ಉ) ಪ್ರಸ್ತುತ ಈ ಜಮೀನು ಈಗ ಕೆಐಎಡಿಬಿ ಯ ವಶದಲ್ಲಿದ್ದು ಸದರಿ ಜಮೀನನ್ನು ಯಾರಿಗೆ ಹಂಚಿಕೆ ಮಾಡಬೇಕೆಂಬುವ ಬಗ್ಗೆ ಇನ್ನೂ ತೀರ್ಮಾನವಾಗಿರುವುದಿಲ್ಲ.

ಊ) ಪ್ರಶ್ನೆ ಉದ್ಭವಿಸುವುದಿಲ್ಲ.

ಋ) ಪ್ರಶ್ನೆ ಉದ್ಭವಿಸುವುದಿಲ್ಲ.

ೠ) ಪ್ರಶ್ನೆ ಉದ್ಭವಿಸುವುದಿಲ್ಲ.

283(413) ಶ್ರೀ ಮೋಹನರ ಪಿ.ಸಿ. ಮತ್ತು (ಚಿಕ್ಕಪೇಟೆ),ಆರ್. ಅಶೋಕ್ (ಉತ್ತರಹಳ್ಳಿ) ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರು ಬಳಿ ಕೆಲಾಗ್ರಾಮ ನಿರ್ಮಿಸಲು ಉದ್ದೇಶಿಸಲಾಗಿದೆಯೇ ಹಾಗೂ ಕಲಾಗ್ರಾಮ ನಿರ್ಮಾಣದ, ಉದ್ದೇಶವೇನು ;